VIJAYAKUMAR KANNUR
Digitally signed by VIJAYAKUMAR KANNUR
Date: 2025.12.05 17:05:17 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 05.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಫ್ ಬಿ ವಕೀಲರಿಂದ :**

ನಾನು 7 ನೇ ತರಗತಿಯವರೆಗೆ ಶಾಲೆ ಕಲಿತಿರುವೆನು. ಆರೋಪಿ ನನಗೆ ದೂರದ ಸಂಬಂಧಿಯಾಗಬೇಕು. ಆರೋಪಿ ಕೋಳಿಗುಡ್ಡ ಗ್ರಾಮದ ಊರಲ್ಲಿ ವಾಸವಾಗಿರುವನು. ಊರಲ್ಲಿ ಇವರ ಸ್ವಂತ ಮನೆ ಇರುವುದು. ಅವರ ಮನೆಯಲ್ಲಿ ಯಾರು ಯಾರು ವಾಸವಾಗಿರುವರು ಎಂದು ನನಗೆ ಅಷ್ಟೊಂದು ಮಾಹಿತಿ ಇರುವುದಿಲ್ಲ. ನಾನು ಆರೋಪಿಯ ಮನೆಗೆ ಹೋಗಿರುವುದಿಲ್ಲ.

2. ಈ ಮೊದಲು ಆರೋಪಿ ನನ್ನ ಕಡೆಯಿಂದ ಸಣ್ಣ ಪ್ರಮಾಣದಲ್ಲಿ ಹಣವನ್ನು ತೆಗೆದುಕೊಳ್ಳುವುದು ಮತ್ತು ಮರಳಿ ನೀಡುವುದು ಮಾಡುತ್ತಿದ್ದನು, ಆದರೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿ ತನ್ನ ಮನೆಯ ಅಡಚಣೆ ಇರುವುದಾಗಿ ಎಂದು ಹೇಳಿ ಹಣ ಪಡೆದುಕೊಂಡಿರುವನು. ಈ ಮನೆಯ ಅಡಚಣೆಯ ವಿಷಯವಾಗಿ ನಾನು ಆರೋಪಿಯ ಮನೆಗೆ ಹೋಗಿ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ.

3. ಮಲ್ಲಪ್ಪ ಗುಡ್ಡದಮನಿ ಎಂಬ ವ್ಯಕ್ತಿಯ ಪರಿಚಯ ನನಗೆ ಇರುವುದು. ಈ ದಿನ ನಾನು ನ್ಯಾಯಾಲಯದ ಆವರಣದಲ್ಲಿ ಮಲ್ಲಪ್ಪ ಗುಡ್ಡದಮನಿ ಎಂಬುವವರು ನೋಡಿರುವೆನು, ಇತ ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿರುವುದಿಲ್ಲ, ಆದರೆ ಆತ ಪ್ರತ್ಯೇಕವಾಗಿ ಬಂದಿರುವನು. ನನಗೆ ಆರೋಪಿಯ ಪರಿಚಯ ಮಲ್ಲಪ್ಪ ಗುಡ್ಡದಮನಿಯ ಮೂಲಕ ಆಗಿರುವುದು ಎಂದರೆ ಸರಿಯಲ್ಲ. ನಾನು ಹಣ ನೀಡುವ 15 ದಿನಕ್ಕಿಂತ ಮುಂಚೆ ಆರೋಪಿ ನನಗೆ ಹಣ ನೀಡುವಂತೆ ಕೇಳಿರುವನು. ಆರೋಪಿ ನಮ್ಮ ಗ್ರಾಮಕ್ಕೆ ಬಂದು ಹಣ ನೀಡುವಂತೆ

ಕೇಳಿರುವೆನು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 10 ರ ಕೈಗಡ ಪತ್ರದ ಇ ಸ್ಟಾಂಪ್ ಪೇಪರ್ ನ್ನು ಆರೋಪಿಯೇ ತೆಗೆದುಕೊಂಡು ಬಂದಿದ್ದನು. ಸದರಿ ದಾಖಲೆಯನ್ನು ದಸ್ತುರು ಬರಹಗಾರನಾದ ಪುರಾಣಿಕ ಎಂಬುವವರು ತಯಾರು ಮಾಡಿಕೊಟ್ಟಿರುವರು. ಅದರ ಮೇಲೆ ಯಾರು ಸಹಿ ಮಾಡಿರುವರು ಎಂದು ನನಗೆ ಗೊತ್ತಿರುವುದು. ಇ ಸ್ಟಾಂಪ್ ಪೇಪರ್ ನ್ನು ಯಾವುದೇ ಒಬ್ಬ ವ್ಯಕ್ತಿ ಬೇರೆಯವರ ಹೆಸರಿನಲ್ಲಿ ಪಡೆಯಬಹುದು ಎಂದರೆ ಸಾಕ್ಷಿ ತನಗೆ ಅಷ್ಟೊಂದು ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ನಿಪಿ 10 ರ ದಾಖಲೆಯ ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ 10 ಬಿ ಸಹಿ ಮಲ್ಲಪ್ಪ ಮುರುಗೇಪ್ಪ ಗುಡ್ಡದಮನಿ ಇವರ ಸಹಿಯಾಗಿರುವುದು.

4. ಆರೋಪಿಯ ಹೆಸರಿನಲ್ಲಿ ಜಮೀನುಗಳು ಇದ್ದು ಆತ ಟಿಪ್ಪರ ವಾಹನದ ವ್ಯಾಪಾರ ಮಾಡುತ್ತಿರುವನು. ಈ ಟಿಪ್ಪರ ವಾಹನವನ್ನು ನೋಡಿರುವೆನು, ಆದರೆ ಆ ವಾಹನಗಳ ನೊಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಮತ್ತು ಮಲ್ಲಪ್ಪ ಗುಡ್ಡದಮನಿಯ ಮಧ್ಯೆ ಯಾವಾಗಲೂ ಹಣದ ವ್ಯವಹಾರ ಆಗುತ್ತಿತ್ತು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಆರೋಪಿ 8 ಲಕ್ಷಗಳಿಗೆ ಬೂಲೆರೋ ವಾಹನ ಖರೀದಿ ಮಾಡಿದ್ದು, ಈ ಹಣವನ್ನು ಮಲ್ಲಪ್ಪ ಗುಡ್ಡದಮನಿ ಇವರೇ ವಾಹನದ ಏಜಂಟರಿಗೆ ವರ್ಗಾವಣೆ ಮಾಡಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ದಿಃ 25.06.2024 ರಂದು ಆರೋಪಿ ರೂ. 5 ಲಕ್ಷ 26 ಸಾವಿರ ಹಣವನ್ನು ಮಲ್ಲಪ್ಪ ಗುಡ್ಡದಮನಿ ಇವರ ಖಾತೆಗೆ ವರ್ಗಾವಣೆ ಮಾಡಿರುವರು ಎಂದರೆ ಸಾಕ್ಷಿ ಈ ವ್ಯವಹಾರದ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು. ಅದೇ ರೀತಿ ರೂ. 2 ಲಕ್ಷ ಮೊತ್ತದ ಚೆಕ್ ನ್ನು ಆರೋಪಿ ಮಲ್ಲಪ್ಪ ಗುಡ್ಡದಮನಿ ಇವರಿಗೆ ನೀಡಿರುವರು ಎಂದರೆ ಅದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು.

5. ನಿಪಿ 1 ರ ಚೆಕ್ IDFC ಅಥಣಿ ಶಾಖೆಯ ಚೆಕಾಗಿರುವುದು. ಚೆಕ್ ನಂ. 000002, ಆದರೆ ಬ್ಯಾಂಕ ಖಾತೆ ನನಗೆ ನೆನಪಿರುವುದಿಲ್ಲ. ನಿಪಿ 1 ರ ಚೆಕ್ ಆರೋಪಿ ನನಗೆ ನೀಡಿರುವಂತ ಚೆಕ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ಆರೋಪಿ ಮಲ್ಲಪ್ಪ ಗುಡ್ಡದಮನಿ

ಇವರಿಗೆ ನೀಡಿರುವನು ಎಂದರೆ ಸರಿಯಲ್ಲ.

6. ನಾನು ಒಕ್ಕಲತನ ಉದ್ಯೋಗ ಮಾಡುತ್ತಿರುವೆನು. ನನ್ನ ಹೆಸರಿನಲ್ಲಿ 7 ಎಕರೆ ಜಮೀನು, ನನ್ನ ಹೆಂಡತಿಯ ಹೆಸರಿನಲ್ಲಿ 2 ಎಕರೆ ಜಮೀನು ಇರುವುದು. ಈ ಜಮೀನುಗಳ ಪಹಣಿ ಪತ್ರಿಕೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ, ಅವಶ್ಯಕ ಬಿದ್ದರೆ ಹಾಜರು ಪಡಿಸುತ್ತೇನೆ. ಈ ಜಮೀನಿನಲ್ಲಿ ಬಾಳೆ, ಅರಿಶಿನ ಹಾಗೂ ಕೈಪಲ್ಲೆ ಬೆಳೆ ಬೆಳೆಯುತ್ತೇವೆ. ಒಂದು ವರ್ಷ ಕ್ಕೆ ಸುಮಾರು 15-20 ಲಕ್ಷ ಆದಾಯ ಬರುವುದು. ಈ ಆದಾಯ ಇದ್ದ ಬಗ್ಗೆ ಯಾವುದೇ ರಶೀದಿಗಳು ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.12.05 17:05:24 +0530